ಮನೇಲಿ, ಅವನು ಹೆಗಲ ಮೇಲಿನ ಟವೆಲ್ಲು ಕೊಡವುತ್ತಾ, ಬಾಯ್ತುಂಬಿದ ತಂಬಾಕನ್ನು ಪಿಚಕ್ ಅಂತ ಉಗೀತಾ ದಿನಕ್ಕೊಂದಾವರ್ತಿಯಾದರೂ ಹಲ್ಕಟ್ ಬಯ್ಗುಳಗಳನ್ನು ಬಯ್ತಾ, ಊರ ಸಿರಿದೇವಿಯೆಂದು ಹೊಗಳಿಸಿಕೊಂಡಿದ್ದ ತನ್ನ ರೂಪವನ್ನೇ ತಾಚಾರ ಮಾಡಿ ಹಂಗಿಸಿ ಮೀಸೆಯೇರಿಸಿ ವ್ಯಂಗ್ಯ ಮಾಡುತ್ತಿದ್ದುದು ಈಗಲೂ ಶಂಕರಿ ತಬ್ಬಿಬ್ಬಾಗುತ್ತಾಳೆ. 'ಚಂದುಳ್ಳ ಚೆಲುವಿ ಅದಿ ನಮ್ಮವ್ವ. ಸ್ವಾದರ ಮಾವನ್ನ ಮಾಡ್ಕೊ. ಮಂದಿಮನಿಗಿಂತ ಅಮ್ಮನ ಮನಿ ಅತ್ತಿ ಮನಿಯಾಗಾಕ ಪುಣ್ಣೇವು ಇರಬೇಕ ತಾಯಿ' ಅಂತ ಹಣ್ಣಡೋ ದಿನ ಹಿರೀಕರೆಲ್ಲ ಹೇಳಿದ್ದೇ ಹೇಳಿದ್ದು. ತನ್ನನ್ನ ಮಡಿಲಲ್ಲಿ ಮಲಗಿಸಿಕೊಂಡು ಬೆಳೆಸಿದ್ದ ಅಜ್ಜಿಯ ಮನೆಗೆ ಸೊಸಿಯಾಗೋದು ತನ್ನ ಪುಣ್ಣೇವು ಅಂತಲೇ ಶಂಕರಿ ತಿಳಿದಳು. ಉಂಡುಟ್ಟಿರಕ್ಕೇನೂ ತತ್ವಾರವಿಲ್ಲದ ಆಸ್ತಿ. ತೊಂದ್ರೆ ಯಾಕ ಬಂತೋ, ಯಾವಾಗ ಬಂತೋ ತಿಳೀದ್ಹಾಂಗ ಆಗಿತ್ತು. ಇಂವ ಗೆಳೆಯರಿಂದ ಕೆಟ್ಟನೋ, ಅವರೇ ಇವನಿಂದ ಕೆಟ್ಟರೋ ಬಿಡಿಸಲಾಗದ್ದು. ನರಗುಂದದಲ್ಲಿ ಮೊಳಕ್ಕೊಂದರಂತೆ ಪುದುಪುದು ಎದ್ದ ಬಾರ್‌ಗಳಿಗೂ ಇವನ ಕಿಸೆಯಾಗಿನ ಕಾಸಿಗೂ ಲಗತ್ತಾಗಿರದಿದ್ದರೆ... ಮೊದಮೊದಲದು ಯಾವಾಗಾದರೊಮ್ಮೆ, ನಂತ್ರ ದಿನಂಪ್ರತಿ ರಾತ್ರಿ, ನಂತ್ರ ಹಗಲ ಹಗಲೂ ಗಂಡ ಕಂಠಮಟ ಕುಡ್ದು ಬಂದು, ಅನ್ನಬಾರ್ದ ಅಂದು ಅಧ್ವಾನ ಮಾಡತೊಡಗಿದ್ದ. ಅಜ್ಜಿ ಅಜ್ಜ ಇಬ್ಬರೂ ಇಲ್ಲವಾಗಿ ಮನಿ ಪರದೇಸಿಯಾಗಿಬಿಡ್ತು. ಆದರೂ ಶಂಕರಿ ತವರಿಗೆ ಬಂದು ಕಣ್ಣೀರಿಡಲಿಲ್ಲ. ಎದೆಗಟ್ಟಿ ಮಾಡಿಕೊಂಡು ಹುಟ್ಟಿದ ಕೂಸುಗಳನ್ನು ಎದರಿಟ್ಟುಕೊಂಡು ಬಾಳೇವು ಮಾಡತೊಡಗಿದ್ದಳು. ಮಗಳ್ನ ನೋಡಿ ಬರೋಕೆ ಅಂತೊಮ್ಮೆ ತಮ್ಮ ರಿಟಾಯ್ರ್ಡ್‌ಮೆಂಟಿನ ರೊಕ್ಕದಿಂದ ಎರಡು ಬಂಗಾರದ ಬಳಿ ಮಾಡಿಸ್ಕಂಡು ಹೋಗಿದ್ದ ಶಿವರಾಯ ಮಾಸ್ತ್ರು ಜೀವತಡೀಲಾರ್ದೆ ನಿಂತ ಮೆಟ್ಟಿನ ಮ್ಯಾಲೆ ಮಗಳ್ನ ಮೊಮ್ಮಕ್ಕಳನ್ನ ಹೊರಡಿಸಿಕೊಂಡು ಬಂದಿದ್ದರು. 'ನೀನು ಸ್ವಾದರಳಿಯ ಅಂತ ಬಿಟ್ಟೇನಿ ಮಗನ. ಅಲಾದಿ ಯಾವನಾರ ಆಗಿದ್ರ ಸಾಸ್ವತ ಜೇಲಕೂಳ ಕಾಣಿಸ್ತಿದ್ನಿ. ಏನ ಮಾಡಿಯಲಾ ಪರದೇಸಿ, ನನ್ನ ಮಗಳ್ನ...' ಅಂತ ಮಗಳ ಮೈ ಕೈ ಮ್ಯಾಲಿನ ಕೆಂಪಾನ ಕೆಂಪು ಕಲಿಗಳನ್ನು ನೋಡಿ ಚೀರಿದ್ದರು. ನೋವಿನ ಆವೇಗಕ್ಕೋ... ಬಾಯೊಳಗಿನ ಅಡಿಕೆಹೋಳು ನೆತ್ತಿಗೆ ಸಿಲುಕಿದ್ದಕ್ಕೋ ಮೇಲಿನುಸಿರು ಮೇಲಾಗಿ ಫಜೀತಿಯಾಗಿತ್ತು. ಯಾರೋ ಓಡಿಬಂದು ಸಾವರಿಸಿದ್ದರು. ಅಪ್ಪ ಸಂಭಾಳಿಸಿಕೊಂಡಿದ್ದ. ಆ ಮನೇಲಿ ಒಂದಗಳೂ ಬಾಯಿಗೆ ಹಾಕಿರಲಿಲ್ಲ. ಸೀದಾ ಮಗಳನ್ನ ಧಾರವಾಡದ ಬಾಡಿಗೆ ಮನಿಗೆ ಕರಕೊಂಡು ಬಂದಿದ್ದ. ಬಯಲಸೀಮಿ ಎರಿಮಣ್ಣಿನ ಜ್ವಾಳದ ಹೊಲದಂತ ಅಪ್ಪ. ತನ್ನ ಮಾಸ್ತರಕಿಯಲ್ಲಿ ಇಬ್ಬರು ಹೆಣ್ಮಕ್ಕಳನ್ನು ಮದ್ವೆ ಮಾಡಿ ಗಂಡನ ಮನಿ ತುಂಬಿಸಿ ಎಲ್ಲ ಜಾಜ ಪೂರೈಸುವಲ್ಲಿ ಅರ್ಧ ದುಡುಮಿ ಹಾಕಿದ್ದ. ಇನ್ನರ್ಧ ಮಗನ ಎಂಜಿನಿಯರಿಂಗ್ ಕಲಿಕೆಗೇ ಆಗಿಹೋಗಿತ್ತು. ಪೆನಶನ್ ರೊಕ್ಕದ ದೊಡ್ಡ ಮೊತ್ತವನ್ನು ಮಗನ ಪ್ರೊಜೆಕ್ಟ್‌ಗೆ ಕೊಟ್ಟಿದ್ದ. ಮಗನ ಮದುವೆ ಮಾಡಿದ್ದ. ಆಗೆಲ್ಲ ಶಿವರಾಯ ಮಾಸ್ತರ ಖದರು ನೋಡಿದ ಸರೀಕರು, 'ಮದುಮಗನಿಗಿಂತ ನಿಂಗs ಕಳಾ ಏರೇತೇಳ...' ಎಂದು ಛೇಡಿಸಿದ್ದರು. ಮಾಸ್ತರು ಧನ್ಯತೆಯ ಬೆವರೊರೆಸಿಕೊಂಡಿದ್ದರು. ಶಂಕರಿಗೆ ಸರಿಯಾಗಿ ನೆನಪಿದೆ – ಮಗಳು ಮೊಮ್ಮಕ್ಕಳು ತನ್ನ ಸುಪರ್ದಿಗೆ ಬಂದು ಅತ್ತಕಡೆ ಅಳಿಯ ಮಹರಾಯ ಹೊಲ ಮನಿ ಸಾಲುಸಾಲ್ಗಟ್ಟಿ ಮಾರಿಕೊಳ್ತಾ ಅಂದಾದುಂದಿ ನಡೆಸಿದ ಸುದ್ದಿ ಎದ್ದೆದ್ದು ನೆತ್ತಿ ಬಡಿಯುವಾಗ, ಮಾಸ್ತರು ಕುಸೀತಿರೋ ಶಕ್ತಿಯನ್ನು ಎತ್ಗಟ್ಟಿಕೊಂಡು ಮೊಮ್ಮಕ್ಕಳಿಬ್ಬರಿಗೂ ಸರಿರಾತ್ರಿ ತನಾ ಕುಂತು ಓದಿಸಿದ್ರು. ಅಳಿಯ ಬೇಹೋಷ್ ಆಗಿ ನರಗುಂದದ ಹಾದಿ ಬದಿ ಬಿದ್ದಾನ ಅಂತ ಕೇಳಿ, ಕಾರ್ ಗಾಡಿ ಮಾಡಿಕೊಂಡು ದೊಡ್ಡ ದವಾಖಾನಿ ಸೇರ್ಸಿ, ಪರತ ಹೆಣ ಸುತಗಂಡು ಬಂದು ಧಕ್ಕನೆ ಕುಂತುಬಿಟ್ಟಿದ್ರು. 'ಯವ್ವಾ ಶಾಂಕರೀ' ಅಂತ ಅಪ್ಪ ದನಿತಗ್ಗು ಅತ್ತಿದ್ದ ನೋಟ ಶಂಕರಿಯ ಮನಸ್ಸಲ್ಲಿ ಊರಿ ಕೂತುಬಿಟ್ಟಿದೆ. ಅಪ್ಪನ ಕರೆಯಲ್ಲಿ ಏನೆಲ್ಲ ತಪ್ಪೊಪ್ಪಿಗೆಗಳಿದ್ದವು. ಶಂಕರಿಗದು ಮುಟ್ಟಿತ್ತು. ಅದ್ಕೇ ಅವಳು ಆಗಾಗ ಹೇಳ್ಕೊಳ್ಳೋದು – ಹಡದವ್ರು ಒಳ್ಳೇದಾಗಲಿ ಅಂತನಾ ಗುದ್ದ್ಯಾಡತಾರ. ಆದ್ರ